# ಕರ್ನಾಟಕ ಸರ್ಕಾರದ ನಡವಳಿಗಳು

## ವಿಷಯ: ನಿವೃತ್ತಿ ವೇತನ ಸೌಲಭ್ಯಗಳ ಪರಿಷ್ಕರಣೆ

**ಸರ್ಕಾರಿ ಆದೇಶ ಸಂಖ್ಯೆ: ಆಇ 33 ಪಿಇಎನ್ 2018, ಬೆಂಗಳೂರು, ದಿನಾಂಕ : 24.04.2018**

ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 22 ಎಸ್‌ಆರ್‌ಪಿ 2017 ದಿನಾಂಕ: 01.06.2017ರಲ್ಲಿ ರಚಿಸಲಾಗಿದ್ದ 6ನೇ ರಾಜ್ಯ ವೇತನ ಆಯೋಗ ತನ್ನ ವರದಿಯನ್ನು ದಿನಾಂಕ: 31.01.2018ರಂದು ಸಲ್ಲಿಸಿದೆ.

2. 6ನೇ ರಾಜ್ಯ ವೇತನ ಆಯೋಗವು ಮಾಡಲಾಗಿರುವ ಶಿಫಾರಸ್ಸುಗಳನ್ನು ಸರ್ಕಾರವು ಆದೇಶ ಸಂಖ್ಯೆ: ಆಇ 06 ಎಸ್‌ಆರ್‌ಪಿ 2018 ದಿನಾಂಕ:01.03.2018ರಲ್ಲಿ ಒಪ್ಪಿಕೊಂಡಿರುವ ಹಿನ್ನೆಲೆಯಲ್ಲಿ, ನಿವೃತ್ತಿ ವೇತನ ಸೌಲಭ್ಯಗಳ ಪರಿಷ್ಕರಣೆ ಕುರಿತಂತೆ ಈ ಕೆಳಕಂಡ ಆದೇಶಗಳನ್ನು ಹೊರಡಿಸಲು ಸರ್ಕಾರವು ಹರ್ಷಿಸುತ್ತದೆ.

**3. ಕನಿಷ್ಠ ನಿವೃತ್ತಿ ವೇತನ:**

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ಮತ್ತು ಕರ್ನಾಟಕ ನಾಗರೀಕ ಸೇವಾ(ಅಸಾಧಾರಣ ನಿವೃತ್ತಿ ವೇತನ) ನಿಯಮಾವಳಿಗಳು, 2003 ಅನ್ವಯ ಲಭ್ಯವಾಗುವ ಕೆಳಕಂಡ ವಿವಿಧ ಬಗೆಯ ನಿವೃತ್ತಿ ವೇತನಗಳ ಕನಿಷ್ಠ ಮೊತ್ತವನ್ನು ಮಾಹೆಯಾನ ರೂ.8,500/-ಗಳಿಗೆ ಹೆಚ್ಚಿಸತಕ್ಕದ್ದು.

ಅ) ವಯೋ ನಿವೃತ್ತಿ ವೇತನ

ಆ) ವಿಶ್ರಾಂತಿ ನಿವೃತ್ತಿ ವೇತನ

ಇ) ಅಶಕ್ತತಾ ನಿವೃತ್ತಿ ವೇತನ

ಈ) ಪರಿಹಾರ ನಿವೃತ್ತಿ ವೇತನ

ಉ) ಅನುಕಂಪ ಭತ್ಯೆ

**4. ಗರಿಷ್ಠ ನಿವೃತ್ತಿ ವೇತನ:**

4.1 ಮೇಲಿನ ಕಂಡಿಕೆ-3ರಲ್ಲಿ ಕಾಣಿಸಲಾಗಿರುವ ವಿವಿಧ ಬಗೆಯ ನಿವೃತ್ತಿ ವೇತನಗಳ ಗರಿಷ್ಠ ಮೊತ್ತದ ಪರಿಮಿತಿಯು ಮಾಹೆಯಾನ ರೂ.75,300/-ಗಳಿಗೆ ನಿಗದಿಪಡಿಸತಕ್ಕದ್ದು.

4.2 ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು ನಿಯಮ 210ರ ಅಡಿ ಮಂಜೂರು ಮಾಡಲಾಗುವ ತಾತ್ಕಾಲಿಕ (ಅಡ್‌ಹಾಕ್) ನಿವೃತ್ತಿ ವೇತನ ಪ್ರಮಾಣವು ಅತ್ಯಂತ ಅಸಾಧಾರಣ ಸಂದರ್ಭಗಳನ್ನು ಹೊರತುಪಡಿಸಿ ಮಾಹೆಯಾನ ರೂ.8,500/-ಗಳನ್ನು ಮೀರಲಾಗತಕ್ಕದ್ದಲ್ಲ.

**5. ತುಟ್ಟಿ ಭತ್ಯೆ:**

ಸರ್ಕಾರಿ ನೌಕರರ ಪ್ರಕರಣಗಳಲ್ಲಿ ಅಳವಡಿಸಿಕೊಳ್ಳಲಾಗುವ ತುಟ್ಟಿಭತ್ಯೆಯ ಶೇಕಡಾವಾರು ಪ್ರಮಾಣವನ್ನೇ ಕುಟುಂಬ ಪಿಂಚಣಿದಾರರೂ ಸೇರಿದಂತೆ ನಿವೃತ್ತಿ ವೇತನದಾರರಿಗೂ ಮುಂದುವರಿಸಿ ಮಂಜೂರು ಮಾಡತಕ್ಕದ್ದು. ದಿನಾಂಕ:01.07.2017ರಂದು ಲಭ್ಯವಿದ್ದ ತುಟ್ಟಿಭತ್ಯೆಯನ್ನು ಪರಿಷ್ಕೃತ ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದಲ್ಲಿ ವಿಲೀನಗೊಳಿಸಿರುವುದರಿಂದ, ತುಟ್ಟಿಭತ್ಯೆಯ ಮೊದಲನೆಯ ಕಂತು ದಿನಾಂಕ:01.01.2018ರಂದು ಪ್ರಾಪ್ತವಾಗುತ್ತದೆ.

**6. ನಿವೃತ್ತಿ ಉಪದಾನ / ಮರಣ ಉಪದಾನ :**

6.1 ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ಅಡಿ ನಿವೃತ್ತಿ ಉಪದಾನ ಮೊತ್ತ ಸಂದಾಯವಾಗಬೇಕಾದ ಹತ್ತು ಆರು ಮಾಸಿಕ ಅವಧಿಗಳಿಗೆ ಕಡಿಮೆಯಿಲ್ಲದೆ ಅರ್ಹತಾದಾಯಕ

ಸೇವೆಯನ್ನು ಪೂರ್ಣಗೊಳಿಸಿರುವ ಸರ್ಕಾರಿ ನೌಕರನ ಪ್ರಕರಣದಲ್ಲಿ ಪೂರ್ಣಗೊಳಿಸಲಾದ ಪ್ರತಿ ಆರು ಮಾಸಿಕ ಅರ್ಹತಾ ಸೇವೆಗೆ ಉಪಲಬ್ಧಗಳ ಗರಿಷ್ಠ ಮಿತಿ 16 1/2 ಕ್ಕೆ ಸೀಮಿತಗೊಳಿಸಿ, ಉಪಲಬ್ಧಗಳ 1/4 ನೇ ಭಾಗಕ್ಕೆ ಸಮನಾಗತಕ್ಕದು. ಈ ರೀತಿ ಲೆಕ್ಕ ಹಾಕಲಾದ ನಿವೃತ್ತಿ ಉಪದಾನದ ಮೊತ್ತವು **ದಿನಾಂಕ: 01.04.2018 ರಂದು ಅಥವಾ ತದನಂತರ** ನಿವೃತ್ತರಾಗುವ ಸರ್ಕಾರಿ ನೌಕರರಿಗೆ ಗರಿಷ್ಠ ಮಿತಿ ರೂ.20.00 ಲಕ್ಷ ಗಳಿಗೊಳಪಟ್ಟಿರುತ್ತದೆ.

6.2 ದಿನಾಂಕ: 01.04.2018ರಂದು ಅಥವಾ ತದನಂತರ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ಸರ್ಕಾರಿ ನೌಕರನ ಸಂದರ್ಭದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ಅಡಿ ಲಭ್ಯವಿರುವ ಮರಣ ಉಪದಾನವು ಕೆಳಗೆ ಕಾಣಿಸಿದ ದರಗಳಲ್ಲಿರತಕ್ಕದ್ದು.

| ಅರ್ಹತಾ ಸೇವೆಯ ಅವಧಿ | ಉಪದಾನ ಪ್ರಮಾಣ |
|---|---|
| 1) 1 ವರ್ಷಕ್ಕಿಂತ ಕಡಿಮೆ | ಉಪಲಬ್ಧಗಳ ಎರಡರಷ್ಟು |
| 2) 1 ವರ್ಷಗಳಿಗಿಂತ ಹೆಚ್ಚು ಆದರೆ 5 ವರ್ಷಗಳಿಗಿಂತ ಕಡಿಮೆ | ಉಪಲಬ್ಧಗಳ ಆರರಷ್ಟು |
| 3) 5 ವರ್ಷಗಳಿಗಿಂತ ಹೆಚ್ಚು ಆದರೆ 20 ವರ್ಷಗಳಿಗಿಂತ ಕಡಿಮೆ | ಉಪಲಬ್ಧಗಳ ಹನ್ನೆರಡರಷ್ಟು |
| 4) 20 ವರ್ಷಗಳಿಗಿಂತ ಹೆಚ್ಚು | ಪೂರೈಸಿದ ಪ್ರತಿ ಅರ್ಧ ವರ್ಷದ ಅರ್ಹತಾ ಸೇವೆಗೆ ಉಪಲಬ್ಧಗಳ ಅರ್ಧದಷ್ಟು ಈ ರೀತಿ ದೊರೆಯುವ ಉಪದಾನವು ಗರಿಷ್ಠ ಮೊತ್ತ ಉಪಲಬ್ಧಗಳ 33 ಹಾಗೂ ಮರಣ ಉಪದಾನವು ಯಾವುದೇ ಕಾರಣಕ್ಕೂ ರೂ.20.00ಲಕ್ಷಗಳಿಗೆ ಮೀರತಕ್ಕದ್ದಲ್ಲ. |

**7. ಕುಟುಂಬ ನಿವೃತ್ತಿ ವೇತನ:**

7.1. ಸರ್ಕಾರಿ ನೌಕರನು ದಿನಾಂಕ:01.4.2018ರಂದು ಮತ್ತು ತದನಂತರ ಸೇವೆಯಲ್ಲಿರುವಾಗಲೇ ಮರಣ ಹೊಂದುವ, ನಿವೃತ್ತಿ ಹೊಂದುವ ಸರ್ಕಾರಿ ನೌಕರರಿಗೆ ಕರ್ನಾಟಕ ಸರ್ಕಾರಿ ನೌಕರರ (ಕುಟುಂಬ ಪಿಂಚಣಿ) ನಿಯಮಾವಳಿಗಳು, 2002ರನ್ವಯ ಲಭ್ಯವಾಗುವ ಕುಟುಂಬ ನಿವೃತ್ತಿ ವೇತನವು ಉಪಲಬ್ಧಗಳ ಶೇ.30ರಷ್ಟು ಮಾಹೆಯಾನ ಕನಿಷ್ಠ ರೂ.8,500/- ಮತ್ತು ಗರಿಷ್ಠ ರೂ.45,180/-ಗಳ ಮಿತಿಗೆ ಒಳಪಟ್ಟಿರುತ್ತದೆ.

7.2 ತಂದೆ ತಾಯಿ ಇಬ್ಬರು ಸರ್ಕಾರಿ ನೌಕರರಾಗಿದ್ದು ದಿನಾಂಕ:01.04.2018ರ ದಿನಾಂಕದಂದು ಅಥವಾ ತದನಂತರ ಮೃತರಾದ ಪಕ್ಷದಲ್ಲಿ ಅಪ್ರಾಪ್ತ ಮಕ್ಕಳಿಗೆ ಕರ್ನಾಟಕ ಸರ್ಕಾರಿ ನೌಕರರ(ಕುಟುಂಬ ಪಿಂಚಣಿ) ನಿಯಮಾವಳಿಗಳು, 2002ರ ಅಡಿ ನೀಡುವ ಕುಟುಂಬ ಪಿಂಚಣಿಯು ಗರಿಷ್ಠ ಮಾಹೆಯಾನ ರೂ.45,180/-ಗಳಿಗೆ ಒಳಪಟ್ಟಿರತಕ್ಕದ್ದು.

**8. ಉಪಲಬ್ಧಗಳು:**

ವಿವಿಧ ನಿವೃತ್ತಿ ಮತ್ತು ಮರಣ ಸೌಲಭ್ಯಗಳು ಮತ್ತು ಕುಟುಂಬ ನಿವೃತ್ತಿ ವೇತನಗಳನ್ನು ಲೆಕ್ಕ ಹಾಕುವುದಕ್ಕಾಗಿ, ಉಪಲಬ್ಧ ಪದಕ್ಕೆ ಸರ್ಕಾರಿ ನೌಕರನು ತನ್ನ ನಿವೃತ್ತಿ/ಮರಣ ಸಮಯದಲ್ಲಿ ಹೊಂದಿದ್ದ ಹುದ್ದೆಗೆ ಅನ್ವಯಿಸಲಾಗಿದ್ದ ವೇತನ ಶ್ರೇಣಿಯ ಮೂಲ ವೇತನ ಅಲ್ಲದೆ ಕೆಳಕಂಡ (ಅ) ರಿಂದ (ಇ)ಗಳನ್ನು ಸೇರಿಸಿ ಅರ್ಥೈಸಿಕೊಳ್ಳತಕ್ಕದ್ದು.

(ಅ) ಗರಿಷ್ಠ ವೇತನ ಶ್ರೇಣಿಗೂ ಮೀರಿ, ಸ್ಥಗಿತ ವೇತನ ಬಡ್ತಿ ನೀಡಲಾಗಿದ್ದಲ್ಲಿ ಅದು.

(ಆ) ಕರ್ನಾಟಕ ನಾಗರೀಕ ಸೇವೆಗಳು (ಪರಿಷ್ಕೃತ ವೇತನ) ನಿಯಮಾವಳಿಗಳು 2018ರ ನಿಯಮ 7ರ ಉಪನಿಯಮ (3)ರ ಅಡಿ ವೈಯಕ್ತಿಕ ವೇತನ ನೀಡಲಾಗಿದ್ದಲ್ಲಿ ಅದು.

(ಇ) ಪ್ರಸಕ್ತ ಶ್ರೇಣಿಯ ಗರಿಷ್ಠ ವೇತನಕ್ಕಿಂತ ಹೆಚ್ಚಿಗೆಯಾಗಿ 20, 25 ಮತ್ತು 30 ವರ್ಷಗಳ ಸೇವೆಗೆ ನೀಡಲಾದ ಹೆಚ್ಚುವರಿ ವೇತನ ಬಡ್ತಿ.